ಗುರುವಾರ 07.05.2026 ಬೆಂಗಳೂರು ಬೆಲೆ: 5ರೂ 2 ಪುಟಗಳು ಸಂಪುಟ 01 ಸಂಚಿಕೆ 183 Thursday Bangalore Price: 5/- Rs 2 Pages Volume 01 Issue 183

PRGI/RNI: KNKAN/25/A1348

ಕನ್ನಡ ದಿನಪತ್ರಿಕೆ

ಡಿಜಿಟಲ್ ವಾರ್ತೆ

ಕನ್ನಡಿಗರ ಶಕ್ತಿ

DIGITAL VARTHE

ಅಭಿಷೇಕ್ ಚಿಕ್ಕಮಾರನಹಳ್ಳಿ
ಸಾರಥ್ಯದಲ್ಲಿ

digitalvarthe@gmail.com
www.digitalvarthe.com
epaper.digitalvarthe.com
Mob: 9538786812
Office: 9480847498

ಶೃಂಗೇರಿ ಅಂಚೆ ಮತಗಳ ವಿವಾದ ದೇಶವೇ ಬೆಚ್ಚಿಬೀಳಿಸುವ ಕ್ರಿಮಿನಲ್ ಸಂಚು:ಸಿಎಂ

"ಕಾಂಗ್ರೆಸ್ ಅಭ್ಯರ್ಥಿಗೆ ಬಿದ್ದ ಮತಗಳನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ, ಇದು ಪ್ರಜಾಪ್ರಭುತ್ವದ ಮೇಲಿನ ದಾಳಿ"

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರಿನ ಗೃಹ ಕಚೇರಿ ಕೃಷ್ಣದಲ್ಲಿ ನಡೆಸಿದ ಮಹತ್ವದ ಪತ್ರಿಕಾಗೋಷ್ಠಿಯಲ್ಲಿ ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ ವಿಚಾರವಾಗಿ ಬಿಜೆಪಿ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿದರು. ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ರಾಜೇಗೌಡ ಅವರಿಗೆ ಬಿದ್ದಿದ್ದ ಮತಗಳನ್ನು ಉದ್ದೇಶಪೂರ್ವಕವಾಗಿ ತಿದ್ದುವ ಮೂಲಕ ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಬೀರುವ ಯತ್ನ ನಡೆದಿದೆ ಎಂದು ಆರೋಪಿಸಿದ ಮುಖ್ಯಮಂತ್ರಿ, "ಇದು ಕೇವಲ ಚುನಾವಣಾ ಅಕ್ರಮವಲ್ಲ, ಪ್ರಜಾಪ್ರಭುತ್ವದ ಮೇಲಿನ ದಾಳಿ" ಎಂದು ತೀವ್ರವಾಗಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಶೃಂಗೇರಿ ಕ್ಷೇತ್ರದ ಚುನಾವಣಾ ಫಲಿತಾಂಶ ಹಾಗೂ ಮರು ಎಣಿಕೆ ಪ್ರಕ್ರಿಯೆಯ ಕುರಿತು ವಿವರವಾದ ಮಾಹಿತಿ ನೀಡಿದರು. "2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಾಜೇಗೌಡ ಅವರು 201 ಮತಗಳ ಅಂತರದಲ್ಲಿ ಜಯ ಸಾಧಿಸಿದ್ದರು. ಅವರಿಗೆ ಒಟ್ಟು 59,171 ಮತಗಳು ಬಂದಿದ್ದವು. ಬಿಜೆಪಿಯ ಅಭ್ಯರ್ಥಿ ಜೀವರಾಜ್ ಅವರಿಗೆ 58,970 ಮತಗಳು ಬಂದಿದ್ದವು. ಇವಿಎಂ ಮತಗಳಲ್ಲಿ ರಾಜೇಗೌಡರಿಗೆ 58,602 ಮತಗಳು ಹಾಗೂ ಅಂಚೆ ಮತಗಳಲ್ಲಿ 569 ಮತಗಳು ಲಭಿಸಿದ್ದವು. ಜೀವರಾಜ್ ಅವರಿಗೆ ಇವಿಎಂನಲ್ಲಿ 58,278 ಮತಗಳು ಹಾಗೂ ಅಂಚೆ ಮತಗಳಲ್ಲಿ 692 ಮತಗಳು ಬಂದಿದ್ದವು" ಎಂದು ಹೇಳಿದರು.

"ಆ ಸಮಯದಲ್ಲಿ ಮತ ಎಣಿಕೆ ಪ್ರಕ್ರಿಯೆ ಸಂಪೂರ್ಣವಾಗಿ ಚುನಾವಣಾಧಿಕಾರಿಗಳ ಸಮ್ಮುಖದಲ್ಲಿ ನಡೆದಿತ್ತು. ಎಲ್ಲಾ ಅಭ್ಯರ್ಥಿಗಳ ಏಜೆಂಟರು, ಅಧಿಕಾರಿಗಳು ದಾಖಲೆಗಳಿಗೆ ಸಹಿ ಹಾಕಿದ್ದರು. ಎಲ್ಲ ಅಂಚೆ ಮತಗಳನ್ನು ಮಾನ್ಯ ಮತಗಳೆಂದು ಒಪ್ಪಿಕೊಂಡು ಫಲಿತಾಂಶ ಘೋಷಿಸಲಾಗಿತ್ತು. ಯಾರೂ ಯಾವುದೇ ಆಕ್ಷೇಪ ಎತ್ತಿರಲಿಲ್ಲ" ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದರು.

ಆದರೆ ಫಲಿತಾಂಶದ ಬಳಿಕ ಬಿಜೆಪಿ ಅಭ್ಯರ್ಥಿ ಜೀವರಾಜ್ ಅವರು ರಾಜ್ಯ ಹೈಕೋರ್ಟ್‌ಗೆ ತೆರಳಿ ಮರು ಎಣಿಕೆಗೆ ಅರ್ಜಿ ಸಲ್ಲಿಸಿದ್ದರು. "ನ್ಯಾಯಾಲಯ 2026ರ ಮಾರ್ಚ್ 6ರಂದು ಮರು ಎಣಿಕೆಗೆ ಆದೇಶ ನೀಡಿತು. ಆದರೆ ಮರು ಎಣಿಕೆಯಲ್ಲಿ ಕಂಡುಬಂದ ವ್ಯತ್ಯಾಸಗಳು ದೇಶವೇ ಬೆಚ್ಚಿಬೀಳುವಂತಿವೆ" ಎಂದು ಮುಖ್ಯಮಂತ್ರಿ ಹೇಳಿದರು.

"569 ಮತಗಳಲ್ಲಿ 255 ಮತಗಳು ವಿಕಾವಿಕೆ ಅನರ್ಹ ಹೇಗೆ?":

ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ಆರೋಪ ಮಾಡುತ್ತಾ, "ಮೊದಲು ಮಾನ್ಯವಾಗಿದ್ದ 569 ಅಂಚೆ ಮತಗಳಲ್ಲಿ ಮರು ಎಣಿಕೆಯಲ್ಲಿ ಕೇವಲ 314 ಮತಗಳನ್ನು ಮಾತ್ರ ಅರ್ಹವೆಂದು ಪರಿಗಣಿಸಲಾಗಿದೆ. ಉಳಿದ 255 ಮತಗಳನ್ನು ಅನರ್ಹವೆಂದು ಘೋಷಿಸಲಾಗಿದೆ. ಬಿಜೆಪಿಯ ಅಭ್ಯರ್ಥಿ ಜೀವರಾಜ್ ಅವರಿಗೆ ಮಾತ್ರ 690 ಅಂಚೆ ಮತಗಳು ಲಭಿಸಿವೆ. ಇದರಿಂದ ಕಾಂಗ್ರೆಸ್ ಅಭ್ಯರ್ಥಿಗೆ ಬಿದ್ದ ಮತಗಳನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ" ಎಂದು ಹೇಳಿದರು.

"ಇದು ಸಾಮಾನ್ಯ ಲೋಪವಲ್ಲ. ಇದು ಸಂಘಟಿತ ವೋಟ್ ಡಕಾಯಿತಿ. ಚುನಾವಣಾ ಪ್ರಕ್ರಿಯೆಯನ್ನೇ ಹಾಳು ಮಾಡುವ ಕ್ರಿಮಿನಲ್ ಸಂಚು ನಡೆದಿದೆ. ಜನರ ತೀರ್ಪನ್ನು ಬದಲಾಯಿಸಲು ಯಾರೋ ಸಂಚು ರೂಪಿಸಿದ್ದಾರೆ" ಎಂದು ಮುಖ್ಯಮಂತ್ರಿ ಆರೋಪಿಸಿದರು.

"ಡಬಲ್ ಇಂಜಿನ್ ಸರ್ಕಾರದ ಕಾಲದಲ್ಲೇ ಮತಪತ್ರ ತಿದ್ದುಪಡಿ": ಈ ಅಕ್ರಮಗಳು ನಡೆದ ಸಂದರ್ಭದಲ್ಲಿ ರಾಜ್ಯ ಹಾಗೂ ಕೇಂದ್ರದಲ್ಲಿ ಬಿಜೆಪಿ ಸರ್ಕಾರವೇ ಅಧಿಕಾರದಲ್ಲಿತ್ತು ಎಂದು ಸಿದ್ದರಾಮಯ್ಯ ನೆನಪಿಸಿದರು. "ಆಗ ರಾಜ್ಯದಲ್ಲೂ ಬಿಜೆಪಿಯ ಸರ್ಕಾರವಿತ್ತು. ಕೇಂದ್ರದಲ್ಲೂ ಅವರದೇ ಸರ್ಕಾರವಿತ್ತು. ಅವರು ಹೆಮ್ಮೆಪಟ್ಟು ಡಬಲ್ ಇಂಜಿನ್ ಸರ್ಕಾರ ಎಂದು ಹೇಳುತ್ತಿದ್ದರು. ಮತ ಎಣಿಕೆ ಮುಗಿದ ಬಳಿಕ ಎಲ್ಲಾ ದಾಖಲೆಗಳನ್ನು ಟ್ರಂಕ್‌ಗಳಲ್ಲಿ ಇಡಲಾಗುತ್ತದೆ. ಆ ನಂತರ ಅವುಗಳಿಗೆ ಏನಾಯಿತು? ಕಾಂಗ್ರೆಸ್ ಅಭ್ಯರ್ಥಿಗೆ ಬಿದ್ದ ಮತಗಳನ್ನು ಯಾರ ಆದೇಶದ ಮೇರೆಗೆ ತಿದ್ದಲಾಯಿತು? ಸಿಬ್ಬಂದಿ ಮೂಲಕ ಈ ಕೃತ್ಯ ನಡೆದಿದೆ ಎಂಬ ಅನುಮಾನ ಗಂಭೀರವಾಗಿದೆ" ಎಂದು ಪ್ರಶ್ನಿಸಿದರು.

"ಮೂರನೇ ಸುತ್ತಿನ 170 ಮತಗಳು ಈಗ ಅನರ್ಹ!": ಮುಖ್ಯಮಂತ್ರಿ ಮತ್ತೊಂದು ಗಂಭೀರ ಅಂಶವನ್ನು ಬಹಿರಂಗಪಡಿಸಿದರು. "ರಾಜೇಗೌಡ ಅವರಿಗೆ ಮೂರನೇ ಸುತ್ತಿನಲ್ಲಿ ಬಂದಿದ್ದ ಎಲ್ಲಾ 170 ಅಂಚೆ ಮತಗಳನ್ನು ಈಗ ಅನರ್ಹವೆಂದು ಹೇಳಲಾಗುತ್ತಿದೆ. ಆದರೆ 2023ರಲ್ಲಿ ಮತ ಎಣಿಕೆ ನಡೆಯುವಾಗ ಅವುಗಳನ್ನು ಮಾನ್ಯ ಮತಗಳೆಂದು ಪರಿಗಣಿಸಲಾಗಿತ್ತು. ಚುನಾವಣಾಧಿಕಾರಿಗಳು ಹಾಗೂ ಎಲ್ಲಾ ಏಜೆಂಟರು ದಾಖಲೆಗಳಿಗೆ ಸಹಿ ಹಾಕಿದ್ದರು. ಆಗ ಮಾನ್ಯವಾಗಿದ್ದ ಮತಗಳು ಈಗ ಹೇಗೆ ಅನರ್ಹವಾಗುತ್ತವೆ?" ಎಂದು ಪ್ರಶ್ನಿಸಿದರು.

"ಅವು ನಿಜವಾಗಿಯೂ ಅನರ್ಹ ಮತಗಳಾಗಿದ್ದರೆ ಆಗಲೇ ಬಿಜೆಪಿ ಏಜೆಂಟರು ಆಕ್ಷೇಪ ಎತ್ತಬಹುದಾಗಿತ್ತು. ಆದರೆ ಆಗ ಯಾರೂ ಮಾತಾಡಲಿಲ್ಲ. ಈಗ ಮರು ಎಣಿಕೆಯಲ್ಲಿ ಮಾತ್ರ ವ್ಯತ್ಯಾಸ ಕಾಣುತ್ತಿರುವುದು ದೊಡ್ಡ ಸಂಶಯಕ್ಕೆ ಕಾರಣವಾಗಿದೆ" ಎಂದು ಹೇಳಿದರು.

"ಚುನಾವಣಾ ವೀಕ್ಷಕರು ಆಯೋಗಕ್ಕೆ ಪತ್ರ ಬರೆದಿದ್ದಾರೆ": ಮರು ಎಣಿಕೆ ವೇಳೆ ಚುನಾವಣಾ ವೀಕ್ಷಕರು ಸಹ ಹಾಜರಿದ್ದರು ಎಂದು ಮುಖ್ಯಮಂತ್ರಿ ಹೇಳಿದರು. "ಗಂಭೀರ ಸ್ವರೂಪದ ಕ್ರಿಮಿನಲ್ ಸಂಚು ನಡೆದಿರುವ ಕುರಿತು ಚುನಾವಣಾ ವೀಕ್ಷಕರು ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದಾರೆ ಎಂಬ ಮಾಹಿತಿ ನಮಗೆ ಲಭ್ಯವಾಗಿದೆ. ಈ ಪ್ರಕರಣದಲ್ಲಿ ಅಂಚೆ ಮತಪತ್ರಗಳನ್ನು ಫೊರೆನ್ಸಿಕ್ ಪರೀಕ್ಷೆಗೆ ಕಳುಹಿಸಬೇಕಾಗಿತ್ತು. ಆದರೆ ಅದನ್ನು ಮಾಡಿಲ್ಲ" ಎಂದು ಅವರು ಆರೋಪಿಸಿದರು.

"ಇಂತಹ ಪರಿಸ್ಥಿತಿಯಲ್ಲಿ ಚುನಾವಣಾ ಫಲಿತಾಂಶ ಘೋಷಣೆ ಮಾಡುವ ಅಧಿಕಾರವನ್ನು ನ್ಯಾಯಾಲಯಕ್ಕೆ ಬಿಡಬೇಕಾಗಿತ್ತು. ಆದರೆ ಚುನಾವಣಾಧಿಕಾರಿಗಳು ಆತುರಾತುರವಾಗಿ ಫಲಿತಾಂಶ ಪ್ರಕಟಿಸಿದ್ದಾರೆ" ಎಂದು ಅಸಮಾಧಾನ ವ್ಯಕ್ತಪಡಿಸಿದರು.

"ಚುನಾವಣಾಧಿಕಾರಿಗಳು ಏಕೆ ಆತುರಪಟ್ಟರು?": ಚುನಾವಣಾಧಿಕಾರಿಗಳ ಪಾತ್ರದ ಕುರಿತು ಮುಖ್ಯಮಂತ್ರಿ ಪ್ರಶ್ನೆ ಎತ್ತಿದರು. "ಚುನಾವಣಾ ವೀಕ್ಷಕರ ಅನುಮತಿ ಪಡೆದ ಬಳಿಕವೇ ಫಲಿತಾಂಶ ಘೋಷಿಸಬೇಕಾಗಿತ್ತು. ಆದರೆ ಅವರ ಅನುಮತಿ ಇಲ್ಲದೆ ಫಲಿತಾಂಶ ಪ್ರಕಟಿಸಲಾಗಿದೆ. ಇದು ಗಂಭೀರ ಆಡಳಿತಾತ್ಮಕ ಲೋಪ. ತಪ್ಪು ಮಾಡಿದವರು ಯಾರೇ ಆಗಿದ್ದರೂ ಶಿಕ್ಷೆ ಆಗಲೇಬೇಕು" ಎಂದು ಹೇಳಿದರು.

"ಬಿಜೆಪಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲ": ಮುಖ್ಯಮಂತ್ರಿ ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿ, "ಬಿಜೆಪಿಯವರಿಗೆ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲೆ ನಂಬಿಕೆ ಇಲ್ಲ. ನಿಷ್ಪಕ್ಷಪಾತ ಚುನಾವಣೆಗಳ ಮೇಲೂ ನಂಬಿಕೆ ಇಲ್ಲ. ಈ ಹಿಂದೆ ಚಿಲುಮೆ ಸಂಸ್ಥೆ ಮೂಲಕ ಮತದಾರರ ಪಟ್ಟಿಯನ್ನೇ ತಿದ್ದುಪಡಿ ಮಾಡಲು ಯತ್ನಿಸಿದ್ದರು" ಎಂದು ಆರೋಪಿಸಿದರು.

"ಆಳಂದ ಕ್ಷೇತ್ರದಲ್ಲಿ ನೈಜ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಟ್ಟ ಪ್ರಕರಣಗಳು ನಡೆದಿದ್ದವು. ಇದೇ ಅವರ ರಾಜಕೀಯ ಸಂಸ್ಕೃತಿ. ಚುನಾವಣೆಗಳಲ್ಲಿ ಗೆಲ್ಲಲು ಏನು ಬೇಕಾದರೂ ಮಾಡಲು ಅವರು ಹಿಂದೆ ಮುಂದೆ ನೋಡುವುದಿಲ್ಲ" ಎಂದು ಕಿಡಿಕಾರಿದರು.

"ಕೇಂದ್ರ ಸಚಿವರು ಸಮರ್ಥನೆ ಮಾಡುವುದು ಅರ್ಥವಿಲ್ಲ":: ಈ ಪ್ರಕರಣವನ್ನು ಬಿಜೆಪಿ ನಾಯಕರು ಹಾಗೂ ಕೇಂದ್ರ ಸಚಿವರು ಸಮರ್ಥಿಸಲು ಯತ್ನಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಆರೋಪಿಸಿದರು.

"ಕೇಂದ್ರದ ಇಬ್ಬರು ಸಚಿವರು ಮತ್ತು ವಿರೋಧ ಪಕ್ಷದ ನಾಯಕರು ಈ ವಿಚಾರವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆದರೆ ಜನರು ಎಲ್ಲವನ್ನೂ ಗಮನಿಸುತ್ತಿದ್ದಾರೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಹಾಳು ಮಾಡುವವರನ್ನು ಜನರು ಕ್ಷಮಿಸುವುದಿಲ್ಲ. ಮುಂದಿನ ದಿನಗಳಲ್ಲಿ ಜನರೇ ಅವರಿಗೆ ತಕ್ಕ ಪಾಠ ಕಲಿಸಲಿದ್ದಾರೆ" ಎಂದು ಹೇಳಿದರು.

ಎಫ್‌ಐಆರ್ ದಾಖಲು, ನಿಷ್ಪಕ್ಷಪಾತ ತನಿಖೆಗೆ ಆಗ್ರಹ: ರಾಜೇಗೌಡ ಅವರು ನೀಡಿದ ದೂರಿನ ಆಧಾರದ ಮೇಲೆ ಎಫ್‌ಐಆರ್ ದಾಖಲಾಗಿರುವುದಾಗಿ ಮುಖ್ಯಮಂತ್ರಿ ತಿಳಿಸಿದರು.

ಈ ಪ್ರಕರಣದಲ್ಲಿ ನಿಷ್ಪಕ್ಷಪಾತ ತನಿಖೆ ನಡೆಯಬೇಕು. ಸತ್ಯ ಹೊರಬರಬೇಕು. ಯಾರೇ ಭಾಗಿಯಾಗಿದ್ದರೂ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು" ಎಂದು ಹೇಳಿದರು.

ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು: ಇದೇ ವೇಳೆ ಇತ್ತೀಚೆಗೆ ನಡೆದ ಬಾಗಲಕೋಟೆ ಹಾಗೂ ದಾವಣಗೆರೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯ ಸಾಧಿಸಿರುವುದನ್ನು ಮುಖ್ಯಮಂತ್ರಿ ಪ್ರಸ್ತಾಪಿಸಿದರು.

"ಈ ಚುನಾವಣೆಗಳನ್ನು ಬಿಜೆಪಿ ನಾಯಕರು 2028ರ ವಿಧಾನಸಭಾ ಚುನಾವಣೆಯ ದಿಕ್ಸೂಚಿ ಎಂದು ಹೇಳುತ್ತಿದ್ದರು. ಈಗ ಅವರ ಮಾತಿನ ಅರ್ಥವೇ 2028ರಲ್ಲೂ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರುತ್ತದೆ ಎಂಬುದಾಗಿದೆ" ಎಂದು ವ್ಯಂಗ್ಯವಾಡಿದರು.

"ಜನರು ನಮ್ಮ ಕಾರ್ಯಕ್ರಮಗಳನ್ನು ಒಪ್ಪಿಕೊಂಡಿದ್ದಾರೆ" ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪಿವೆ ಎಂದು ಮುಖ್ಯಮಂತ್ರಿ ಹೇಳಿದರು.

"ಈ ಹಿಂದೆ ನಡೆದ ಮೂರು ಉಪ ಚುನಾವಣೆಯಲ್ಲಿಯೂ ಕಾಂಗ್ರೆಸ್ ಜಯ ಗಳಿಸಿದೆ. ಇದು ಜನರು ನಮ್ಮ ಸರ್ಕಾರದ ಕಾರ್ಯಕ್ರಮಗಳನ್ನು ಒಪ್ಪಿಕೊಂಡಿದ್ದಾರೆ ಎಂಬುದಕ್ಕೆ ಸಾಕ್ಷಿ. ನಾವು ಕೊಟ್ಟ ಮಾತಿನಂತೆ ನಡೆಯುತ್ತಿದ್ದೇವೆ. ಕಾಂಗ್ರೆಸ್ ನುಡಿದಂತೆ ನಡೆಯುವ ಪಕ್ಷ. ಜನರು ನಮ್ಮ ಮೇಲೆ ವಿಶ್ವಾಸ ಹಾಗೂ ಅಭಿಮಾನ ಇಟ್ಟುಕೊಂಡಿದ್ದಾರೆ" ಎಂದು ಹೇಳಿದರು.

"ಎಸ್ಸಿಪಿಐ ಮತಗಳ ಬಗ್ಗೆ ಪರಿಶೀಲನೆ"

ಕೆಲವು ಕ್ಷೇತ್ರಗಳಲ್ಲಿ ಎಸ್ಸಿಪಿಐಗೆ ಮತಗಳು ಬಿದ್ದಿರುವ ಕುರಿತು ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, "ನಾವು ಎಲ್ಲಿ ಎಡವಿದ್ದೇವೆ ಎಂಬುದನ್ನು ಪರಿಶೀಲಿಸುತ್ತೇವೆ. ಜನರ ಸಂದೇಶವನ್ನು ಗಂಭೀರವಾಗಿ ಪರಿಗಣಿಸುತ್ತೇವೆ" ಎಂದು ಹೇಳಿದರು.

ಶ್ರೀ ಆದಿಶಕ್ತಿ ಅಮ್ಮನವರ ದೇವಾಲಯ ಲೋಕಾರ್ಪಣೆ

ದಾಸನಪುರ : ಹಾಸನಪುರ ಹೋಬಳಿಯ ಹುಸ್ಕೂರು ರಸ್ತೆ ಆಶ್ರಯ ಬಡಾವಣೆಯಲ್ಲಿ ಶ್ರೀ ಆದಿಶಕ್ತಿ ಅಮ್ಮನವರ ನೂತನ ದೇವಾಲಯ ಉದ್ಘಾಟನೆ ಅದ್ದೂರಿಯಾಗಿ ನೆರವೇರಿತು.

ಮಂಗಳವಾರ ಮತ್ತು ಬುಧವಾರ ಎರಡು ದಿನಗಳ ಕಾಲ ಗಣಪತಿ ಪೂಜೆ, ಪುಣ್ಯಾಹ, ದೇವಾಲಯ ಶುದ್ಧಿ, ಪಂಚಗವ್ಯ, ಕಳಸ್ಥಾಪನೆ, ನವಗ್ರಹ ಆರಾಧನೆ, ವಾಸ್ತು ಗಣಪತಿ ಹೋಮ , ದುರ್ಗಾ ಹೋಮ, ಸೇರಿದಂತೆ ಹಾಗೂ ಕಳಸ ಪ್ರತಿಷ್ಠಾಪನೆ, ತೀರ್ಥಪ್ರಸಾದ ವಿನಿಯೋಗ , ಅನ್ನ ಸಂತರ್ಪಣೆ,ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿತು.

ಆಶ್ರಯ ಬಡಾವಣೆಯ ನಿವಾಸಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಪ್ರಕಾಶ್ ರವರು ಮಾತನಾಡಿ ದುಷ್ಟರನ್ನು ಸಂಹರಿಸಿ ಶಿಷ್ಟರನ್ನು ರಕ್ಷಿಸುವ ಶಕ್ತಿ ದೇವಿಯ ಮಹಿಮೆ ಅಪಾರವಾಗಿದೆ. ಋಷಿಮುನಿಗಳು ಹಾಗೂ ಸಂತ ಮಹಾಂತರು ಬಾಳಿ ಬೆಳಗಿದ ಭಾರತ ಪುಣ್ಯಭೂಮಿಯಾಗಿದೆ. ಪವಿತ್ರ ನದಿಗಳು, ದೇವಾಲಯಗಳು ನಮ್ಮ ಸಂಸ್ಕೃತಿಯ ಆಧಾರ ಸ್ಥಂಭವಾಗಿವೆ ನಮ್ಮ ಆಶ್ರಯ ಬಡಾವಣೆಯ ನಿವಾಸಿಗಳು ಶ್ರೀ ಆದಿಶಕ್ತಿ ಅಮ್ಮನವರ ಮೇಲೆ ಹೊಂದಿರುವ ಭಕ್ತಿಯನ್ನು ಸಾರುತ್ತದೆ. ತಾಯಿ ನಿಮ್ಮೆಲ್ಲರಿಗೂ ಒಳಿತು ಮಾಡಲಿ' ಎಂದು ಹಾರೈಸಿದರು.ಹೇಳಿದರು.

ಈ ಸಂದರ್ಭದಲ್ಲಿ ಆಶ್ರಯ ಬಡಾವಣೆಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಪ್ರಕಾಶ್, ಡಾ.ವಿಷ್ಣುವರ್ಧನ್ ಸಂಘಟನೆ ಅಧ್ಯಕ್ಷರಾದ ಎಂ.ಜಿ.ಆರ್ ಮಣಿ, ಬಡಾವಣೆಯ ನಿವಾಸಿಗಳಾದ ರಘು ಬಿಎಂಟಿಸಿ, ಚಂದ್ರು ,ಮಲ್ಲಿಕಾರ್ಜುನ್, ಸೈಯದ್ ರಶೀದ್, ಕೃಷ್ಣಮೂರ್ತಿ ,ಶ್ರೀಧರ್ ,ಸುರೇಶ್ ,ಶ್ರೀಮತಿ ತೇಜಾ ಪ್ರಕಾಶ್ ಶ್ರೀಮತಿ ಸುನಿತಾ , ಕಾರ್ಮಿಕ ಪರಿಷತ್ ಮಹಿಳಾ ಅಧ್ಯಕ್ಷ ಶೈಲಾ, ಸೇರಿದಂತೆ ಇನ್ನೂ ಅನೇಕ ಮುಖಂಡರು ವಿವಿಧ ಪಕ್ಷದ ಅಧ್ಯಕ್ಷರು ಪದಾಧಿಕಾರಿಗಳು ಉಪಸ್ಥಿತರಿದ್ದರು.

ನಾಡ ಹಬ್ಬ ವಿಶ್ವವಿಖ್ಯಾತ ಮೈಸೂರು ದಸರಾ

ಹಬ್ಬಕ್ಕೆ ಮಾಡಿದ ಖರ್ಚು 42ಕೋಟಿ ರೂ. ವೆಚ್ಚ ಬಳಕೆ

ತಾಂಡವಪುರ: ಮೇ ಐದು ಇತಿಹಾಸ ಪ್ರಸಿದ್ಧ ಐತಿಹಾಸಿಕ ನಾಡಹಬ್ಬ ಮೈಸೂರು ದಸರಾಗೆ ಖರ್ಚು ವೆಚ್ಚದ ಲೆಕ್ಕವನ್ನು ಕಡೆಗೂ ಬಿಡುಗಡೆಗೊಳಿಸಿರುವ ಜಿಲ್ಲಾಡಳಿತ 429527007ರೂ. ವೆಚ್ಚ ಆಗಿರುವ ಬಗ್ಗೆ ಮಾಹಿತಿ ತಿಳಿಸಿದೆ.

ಈ ಸಂಬಂಧ ಪ್ರಕಟಣೆ ನೀಡಿರುವ ಜಿಲ್ಲಾಡಳಿತ ರಾಜ್ಯ ಸರ್ಕಾರದಿಂದ 30ಕೋಟಿ ರೂ., ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ 10 ಕೋಟಿ ರೂ., ವಿವಿಧ ಪ್ರಾಯೋಜಕತ್ವದಿಂದ 1,81,96000ರೂ., ಟಿಕೇಟ್ ಮಾರಾಟದಿಂದ ಬಂದ ಆದಾಯದಿಂದ 3,2192055 ಸೇರಿ ಒಟ್ಟು 45,03,88,055 ರೂ. ಅನುದಾನ ಬಂದಿರುವುದಾಗಿ ತಿಳಿಸಿದ್ದಾರೆ.

ಸ್ವಾಗತ ಆಮಂತ್ರಣ ಮತ್ತು ಸ್ಥಳಾವಕಾಶ 5,57,37,095 ರೂ., ಮೆರವಣಿಗೆ 1,60,00,000ರೂ., ಪಂಜಿನ ಕವಾಯತು 1,48,00,000ರೂ., ಸ್ತಬ್ಧಚಿತ್ರ 7ಲಕ್ಷ, ರೈತ ದಸರಾ (ಗ್ರಾಮೀಣ ದಸರಾ) 52ಲಕ್ಷ ರೂ., ಸಾಂಸ್ಕೃತಿಕ ದಸರಾ 2ಕೋಟಿ 8ಲಕ್ಷ ರೂ., ಲಲಿತ ಕಲೆ 22ಲಕ್ಷ ರೂ., ಕವಿಗೋಷ್ಠಿ 68ಲಕ್ಷ 90ಸಾವಿರ ರೂ., ಯೋಗ ದಸರಾ 23ಲಕ್ಷ, ಯುವ ದಸರಾ 15ಕೋಟಿ, 94ಲಕ್ಷ ರೂ., ಯುವ ಸಂಭ್ರಮ 2ಕೋಟಿ 52ಲಕ್ಷ 50ಸಾವಿರ ರೂ., ಮಹಿಳಾ ಮಕ್ಕಳ ದಸರಾ 40ಲಕ್ಷ, ಚಲನಚಿತ್ರ 40ಲಕ್ಷ 50ಸಾವಿರ, ಕುಸ್ತಿ 49ಲಕ್ಷ, ಅರಣ್ಯ ಇಲಾಖೆ (ಗಜ ಪಯಣ, ಅರಮನೆ ಆವರಣದಲ್ಲಿ ಆನೆಗಳ ನಿರ್ವಹಣ ವೆಚ್ಚ) 80ಲಕ್ಷ, ಶ್ರೀ ಕಂಠೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾದ ದಸರಾ ಕಾರ್ಯಕ್ರಮ ನಿರ್ವಹಣೆಗೆ 60ಲಕ್ಷ, ರಂಗಾಯಣ ನವರಾತ್ರಿ ರಂಗೋತ್ಸವಕ್ಕೆ 10ಲಕ್ಷ ಸೇರಿ ಒಟ್ಟು 33,72,27,095 ರೂ. ವೆಚ್ಚವಾಗಿದೆ. ಇದರೊಟ್ಟಿಗೆ ದಸರಾ ಸಿವಿಲ್ ಕಾಮಗಾರಿಗಳ ವೆಚ್ಚದಲ್ಲಿ ವಿವಿಧ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾದ ಮೊತ್ತ 5ಕೋಟಿ 73ಲಕ್ಷ 72ಸಾವಿರ 727ರೂ., ಏರ್ ಶೋ ಗೆ 55ಲಕ್ಷ ವೆಚ್ಚವಾಗಿದೆ. ಇನ್ನೂ ಮಂಡ್ಯ ಜಿಲ್ಲೆಗೆ 2ಕೋಟಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರಕ್ಕೆ 55ಲಕ್ಷ, ಐಟಿ ಹಾಗೂ ಜಿಎಸ್‌ಟಿಗೆ 37ಲಕ್ಷದ 27ಸಾವಿರ 185ರೂ., ಕನ್ನಡ ಪುಸ್ತಕ ಪ್ರ

ಅಪ್ರಾಪ್ತ ಮಕ್ಕಳಿಂದ ಕೆಲಸ; ಗೋಡೌನ್ ಮಾಲೀಕರ ವಿರುದ್ಧ ಪ್ರಕರಣ

ಬೆಂಗಳೂರು ಗ್ರಾಮಾಂತರ ಜಿಲ್ಲೆ: ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಹೋಬಳಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಖಾಸಗಿ ಕಂಪನಿಗೆ ಸೇರಿದ ಗೋಡೌನ್‌ನಲ್ಲಿ ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಅಕ್ರಮವಾಗಿ ದುಡಿಸಿಕೊಳ್ಳಲಾಗುತ್ತಿದ್ದ ಪ್ರಕರಣ ಬಹಿರಂಗವಾಗಿದ್ದು, ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನೆ ಅಧಿಕಾರಿಗಳು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ 11 ಮಕ್ಕಳನ್ನು ರಕ್ಷಣೆ ಮಾಡಲಾಗಿದೆ. ಈ ಘಟನೆ ಜಿಲ್ಲೆಯಲ್ಲಿ ಮತ್ತೊಮ್ಮೆ ಬಾಲಕಾರ್ಮಿಕ ಪದ್ಧತಿ ಮುಂದುವರಿದಿರುವ ಆತಂಕಕಾರಿ ವಾಸ್ತವವನ್ನು ಹೊರಹಾಕಿದೆ.

ಮಕ್ಕಳನ್ನು ರಾತ್ರಿ ಪಾಳಿಯಲ್ಲಿ ದುಡಿಸಿಕೊಳ್ಳಲಾಗುತ್ತಿದೆ ಎಂಬ ಖಚಿತ ಮಾಹಿತಿ ಕಾರ್ಮಿಕ ಇಲಾಖೆಗೆ ಲಭಿಸಿದ್ದ ಹಿನ್ನೆಲೆ ಮೇ 04ರಂದು ತುರ್ತು ಕಾರ್ಯಾಚರಣೆ ರೂಪಿಸಲಾಗಿತ್ತು. ಮಾಹಿತಿ ಆಧರಿಸಿ ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನೆ, ಹೊಸಕೋಟೆ ತಾಲ್ಲೂಕಿನ ಕಾರ್ಮಿಕ ನಿರೀಕ್ಷಕರ ಕಚೇರಿ ಹಾಗೂ ಸಂಬಂಧಿತ ಅಧಿಕಾರಿಗಳು ಜಂಟಿಯಾಗಿ ದಾಳಿ ನಡೆಸಿದರು. ದಾಳಿ ವೇಳೆ ಗೋಡೌನ್ ಒಳಭಾಗದಲ್ಲಿ ಅಪ್ರಾಪ್ತ ವಯಸ್ಸಿನ ಮಕ್ಕಳು ಕೆಲಸ ನಿರ್ವಹಿಸುತ್ತಿರುವುದು ಪತ್ತೆಯಾಯಿತು.

ಜಿಲ್ಲಾ ಕಾರ್ಮಿಕ ಅಧಿಕಾರಿ ಹರ್ಷವರ್ಧನ್ ಈ ಕುರಿತು ಮಾಹಿತಿ ನೀಡಿ, "ಮಕ್ಕಳನ್ನು ಕಾನೂನುಬಾಹಿರವಾಗಿ ದುಡಿಸಿಕೊಳ್ಳಲಾಗುತ್ತಿದೆ ಎಂಬ ಖಚಿತ ಮಾಹಿತಿ ಬಂದ ತಕ್ಷಣ ಅಧಿಕಾರಿಗಳ ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ಸ್ಥಳದಲ್ಲಿ ಬಾಲ ಹಾಗೂ ಕಿಶೋರ ವಯಸ್ಸಿನ ಮಕ್ಕಳು ಕೆಲಸ ಮಾಡುತ್ತಿರುವುದು ದೃಢಪಟ್ಟ ಹಿನ್ನೆಲೆ ಅವರನ್ನು ತಕ್ಷಣವೇ ರಕ್ಷಿಸಿ ಸುರಕ್ಷಿತ ವಶಕ್ಕೆ ಪಡೆಯಲಾಗಿದೆ" ಎಂದು ತಿಳಿಸಿದ್ದಾರೆ.

ರಾತ್ರಿ ವೇಳೆಯಲ್ಲೇ ಕೆಲಸ: ಪರಿಶೀಲನೆ ವೇಳೆ ಮಕ್ಕಳು ರಾತ್ರಿ ವೇಳೆಯಲ್ಲಿಯೇ ದುಡಿಮೆಯಲ್ಲಿ ತೊಡಗಿಸಿಕೊಂಡಿರುವುದು ಬೆಳಕಿಗೆ ಬಂದಿದೆ. ಗೋಡೌನ್‌ನಲ್ಲಿ ಸರಕು ವಿಂಗಡಣೆ, ಹೊರೆ ಹೊತ್ತು ಸಾಗಣೆ, ಪ್ಯಾಕಿಂಗ್ ಹಾಗೂ ಇತರೆ ಶ್ರಮಾಧಾರಿತ ಕೆಲಸಗಳನ್ನು ಮಕ್ಕಳಿಂದ ಮಾಡಿಸಲಾಗುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೆಲವು ಮಕ್ಕಳು ದೀರ್ಘ ಅವಧಿಯವರೆಗೆ ಕೆಲಸ ಮಾಡುತ್ತಿದ್ದರು ಎಂಬ ಮಾಹಿತಿ ಕೂಡ ಲಭ್ಯವಾಗಿದೆ.

ಮಕ್ಕಳು ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ಮೂಲಭೂತ ಸುರಕ್ಷತಾ ಕ್ರಮಗಳ ಕೊರತೆ ಕಂಡುಬಂದಿದ್ದು, ಆರೋಗ್ಯ ಹಾಗೂ ಸುರಕ್ಷತಾ ದೃಷ್ಟಿಯಿಂದ ಪರಿಸ್ಥಿತಿ ಆತಂಕಕಾರಿ ಆಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ. ಅಪಾಯಕಾರಿ ಪರಿಸರದಲ್ಲಿ ಅಪ್ರಾಪ್ತ ಮಕ್ಕಳನ್ನು ದುಡಿಸಿಕೊಳ್ಳುತ್ತಿರುವುದು ಕಾನೂನುಬಾಹಿರವಾಗಿರುವುದರ ಜೊತೆಗೆ ಮಕ್ಕಳ ಜೀವಕ್ಕೆ ಅಪಾಯ ಉಂಟುಮಾಡುವಂತಹ ಕೃತ್ಯವಾಗಿದೆ ಎಂದು ಅವರು ತಿಳಿಸಿದ್ದಾರೆ.

ಶಿಕ್ಷಣ ಬದಲು ದುಡಿಮೆ: ರಕ್ಷಿಸಲಾದ ಮಕ್ಕಳಲ್ಲಿ ಕೆಲವರು ಶಾಲೆಗೆ ಹೋಗಬೇಕಾದ ವಯಸ್ಸಿನವರಾಗಿದ್ದು, ಶಿಕ್ಷಣದಿಂದ ದೂರವಾಗಿ ದುಡಿಮೆಗೆ ತಳ್ಳಲ್ಪಟ್ಟಿರುವುದು ಕಂಡುಬಂದಿದೆ. ಬಾಲ್ಯವನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿಗೆ ತಳ್ಳಲ್ಪಟ್ಟಿರುವ ಮಕ್ಕಳ ಸ್ಥಿತಿ ಕಂಡು ಅಧಿಕಾರಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದ ಅನೇಕ ಕುಟುಂಬಗಳು ಮಕ್ಕಳನ್ನು ಕೆಲಸಕ್ಕೆ ಕಳುಹಿಸುತ್ತಿರುವುದು ಕಂಡುಬರುತ್ತಿದ್ದು, ಇದು ಮಕ್ಕಳ ಭವಿಷ್ಯಕ್ಕೆ ಗಂಭೀರ ಹಾನಿ ಉಂಟುಮಾಡುತ್ತಿದೆ ಎಂದು ಬಾಲ ಹಕ್ಕುಗಳ ಹೋರಾಟಗಾರರು ಅಭಿಪ್ರಾಯಪಟ್ಟಿದ್ದಾರೆ. ಶಾಲೆಯಲ್ಲಿ ಕಲಿಯಬೇಕಾದ ಮಕ್ಕಳು ಕಾರ್ಖಾನೆ, ಗೋಡೌನ್ ಹಾಗೂ ವಿವಿಧ ಉದ್ಯೋಗ ಕ್ಷೇತ್ರಗಳಲ್ಲಿ ದುಡಿಮೆಗೆ ತಳ್ಳಲ್ಪಡುವುದು ಸಮಾಜದ ದೊಡ್ಡ ವೈಫಲ್ಯ ಎಂದು ಅವರು ಹೇಳಿದ್ದಾರೆ.

ಮಕ್ಕಳನ್ನು ಬಾಲಮಂದಿರಕ್ಕೆ ದಾಖಲಿಕೆ: ಕಾರ್ಯಾಚರಣೆಯಲ್ಲಿ ರಕ್ಷಿಸಲಾದ ಎಲ್ಲಾ ಮಕ್ಕಳನ್ನು ಸುರಕ್ಷಿತವಾಗಿ ವಶಕ್ಕೆ ಪಡೆದು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಲಾಯಿತು. ಬಳಿಕ ಮಕ್ಕಳ ಪುನರ್ವಸತಿ ಮತ್ತು ಆರೈಕೆಯ ದೃಷ್ಟಿಯಿಂದ ಮಕ್ಕಳ ಕಲ್ಯಾಣ ಸಮಿತಿಯ ಮೌಖಿಕ ಆದೇಶದ ಮೇರೆಗೆ ದೇವನಹಳ್ಳಿ ತಾಲ್ಲೂಕಿನ ಸರ್ಕಾರಿ ಬಾಲಕರ ಬಾಲಮಂದಿರಕ್ಕೆ ದಾಖಲಿಸಲಾಗಿದೆ.

ಅಲ್ಲಿ ಮಕ್ಕಳಿಗೆ ಆಹಾರ, ವಸತಿ, ವೈದ್ಯಕೀಯ ತಪಾಸಣೆ ಹಾಗೂ ಸಮಾಲೋಚನೆ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಮಕ್ಕಳ ಕುಟುಂಬ ಹಿನ್ನೆಲೆ, ಶಿಕ್ಷಣ ಪರಿಸ್ಥಿತಿ ಹಾಗೂ ಇತರೆ ಮಾಹಿತಿಗಳನ್ನು ಸಂಗ್ರಹಿಸಿ ಮುಂದಿನ ಪುನರ್ವಸತಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾಲೀಕರ ವಿರುದ್ಧ ಕಾನೂನು ಕ್ರಮ: ಮಕ್ಕಳನ್ನು ಅಕ್ರಮವಾಗಿ ದುಡಿಸಿಕೊಳ್ಳುತ್ತಿದ್ದ ಗೋಡೌನ್ ಮಾಲೀಕರ ವಿರುದ್ಧ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ತಿಳಿಸಿದ್ದಾರೆ. ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಲು ಪ್ರಕ್ರಿಯೆ ಆರಂಭಿಸಲಾಗಿದ್ದು, ಸಂಬಂಧಿತ ದಾಖಲೆಗಳನ್ನು ಸಂಗ್ರಹಿಸಲಾಗುತ್ತಿದೆ.

ಅಧಿಕಾರಿಗಳ ಪ್ರಕಾರ, 18 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ಉದ್ಯೋಗಗಳಲ್ಲಿ ಕೆಲಸಕ್ಕೆ ನೇಮಿಸುವುದು ಗಂಭೀರ ಶಿಕ್ಷಾರ್ಹ ಅಪರಾಧವಾಗಿದೆ. ಇಂತಹ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಕನಿಷ್ಠ ಆರು ತಿಂಗಳಿಗಿಂತ ಕಡಿಮೆ ಇಲ್ಲದಂತೆ ಹಾಗೂ ಗರಿಷ್ಠ ಎರಡು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸುವ ಅವಕಾಶವಿದೆ. ಜೊತೆಗೆ ರೂ.50 ಸಾವಿರದವರೆಗೆ ದಂಡ ವಿಧಿಸಬಹುದಾಗಿದೆ.

"ಮಕ್ಕಳ ಭವಿಷ್ಯ ಹಾಳು ಮಾಡುವವರ ವಿರುದ್ಧ ಯಾವುದೇ ರೀತಿಯ ರಾಜಿ ಇಲ್ಲ. ಮಕ್ಕಳನ್ನು ದುಡಿಮೆಗೆ ತಳ್ಳುವ ಸಂಸ್ಥೆಗಳು ಮತ್ತು ಮಾಲೀಕರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಮುಂದುವರಿಯಲಿದೆ" ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಸಾರ್ವಜನಿಕರ ಸಹಕಾರಕ್ಕೆ ಮನವಿ: ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸಾರ್ವಜನಿಕರ ಸಹಕಾರ ಅತ್ಯಂತ ಅಗತ್ಯವಾಗಿದೆ ಎಂದು ಕಾರ್ಮಿಕ ಇಲಾಖೆ ಮನವಿ ಮಾಡಿದೆ. ಹೋಟೆಲ್, ಅಂಗಡಿ, ಕಾರ್ಖಾನೆ, ವರ್ಕ್‌ಶಾಪ್, ಗೋಡೌನ್ ಅಥವಾ ಇತರೆ ಯಾವುದೇ ಸ್ಥಳಗಳಲ್ಲಿ ಅಪ್ರಾಪ್ತ ಮಕ್ಕಳನ್ನು ಕೆಲಸಕ್ಕೆ ಬಳಸುತ್ತಿರುವುದು ಕಂಡುಬಂದಲ್ಲಿ ತಕ್ಷಣವೇ ಮಕ್ಕಳ ಸಹಾಯವಾಣಿ 1098 ಅಥವಾ ಪೊಲೀಸ್ ಸಹಾಯವಾಣಿ 112ಕ್ಕೆ ಕರೆ ಮಾಡಿ ಮಾಹಿತಿ ನೀಡುವಂತೆ ಅಧಿಕಾರಿಗಳು ಕೋರಿದ್ದಾರೆ.

ಸಾರ್ವಜನಿಕರಿಂದ ಸಿಗುವ ಮಾಹಿತಿಯ ಆಧಾರದ ಮೇಲೆ ಅನೇಕ ಮಕ್ಕಳನ್ನು ರಕ್ಷಿಸಲು ಸಾಧ್ಯವಾಗುತ್ತಿದ್ದು, ಸಮಾಜದ ಪ್ರತಿಯೊಬ್ಬರೂ ಈ ಹೋರಾಟದಲ್ಲಿ ಭಾಗಿಯಾಗಬೇಕು ಎಂದು ಅಧಿಕಾರಿಗಳು ಹೇಳಿದ್ದಾರೆ.

ಜಿಲ್ಲೆಯಲ್ಲಿ ಮುಂದುವರಿಯಲಿವೆ ವಿಶೇಷ ದಾಳಿಗಳು: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬಾಲಕಾರ್ಮಿಕರ ವಿರುದ್ಧ ಮುಂದಿನ ದಿನಗಳಲ್ಲಿಯೂ ವಿಶೇಷ ತಪಾಸಣೆ ಮತ್ತು ದಾಳಿಗಳನ್ನು ಮುಂದುವರಿಸಲಾಗುವುದು ಎಂದು ಕಾರ್ಮಿಕ ಇಲಾಖೆ ತಿಳಿಸಿದೆ. ಕೈಗಾರಿಕಾ ಪ್ರದೇಶಗಳು, ಗೋಡೌನ್‌ಗಳು, ಹೋಟೆಲ್‌ಗಳು, ನಿರ್ಮಾಣ ಕಾಮಗಾರಿಗಳು ಹಾಗೂ ವಿವಿಧ ಉದ್ಯೋಗ ಕ್ಷೇತ್ರಗಳಲ್ಲಿ ಆಚ್ಚರಿ ತಪಾಸಣೆ ನಡೆಸಲಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮಕ್ಕಳನ್ನು ಶಿಕ್ಷಣದಿಂದ ವಂಚಿಸಿ ದುಡಿಮೆಗೆ ತಳ್ಳುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದರ ಜೊತೆಗೆ, ಮಕ್ಕಳನ್ನು ಶಾಲೆಗೆ ಮರಳಿ ಸೇರಿಸುವ ನಿಟ್ಟಿನಲ್ಲಿ ಪುನರ್ವಸತಿ ಕಾರ್ಯಕ್ರಮಗಳಿಗೂ ಆದ್ಯತೆ ನೀಡಲಾಗುತ್ತದೆ ಎಂದು ಇಲಾಖೆ ತಿಳಿಸಿದೆ.

ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಅಧಿಕಾರಿಗಳು: ಈ ಜಂಟಿ ಕಾರ್ಯಾಚರಣೆಯಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನೆ ಸೊಸೈಟಿಯ ಯೋಜನಾ ನಿರ್ದೇಶಕರಾದ ಗಣೇಶಮೂರ್ತಿ ಎ.ಎಸ್., ಹೊಸಕೋಟೆ ತಾಲ್ಲೂಕಿನ ಕಾರ್ಮಿಕ ನಿರೀಕ್ಷಕರಾದ ಯತೀಶ್ ಕುಮಾರ್ ಸೇರಿದಂತೆ ಕಾರ್ಮಿಕ ಇಲಾಖೆ ಮತ್ತು ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಇತರೆ ಸಿಬ್ಬಂದಿ ಭಾಗವಹಿಸಿದ್ದರು. ಅವರ ಸಮನ್ವಯದ ಕಾರ್ಯಾಚರಣೆಯಿಂದ 11 ಮಕ್ಕಳನ್ನು ಸುರಕ್ಷಿತವಾಗಿ ರಕ್ಷಿಸಲು ಸಾಧ್ಯವಾಗಿದೆ.

ಸಚಿವ ಜಮೀರ್ ಮನೆಯಲ್ಲಿ ಕೋಟ್ಯಾಂತರ ಚಿನ್ನ ಕಳ್ಳತನ; ಸಂಬಂಧಿಕರ ಬಂಧನ

ಬೆಂಗಳೂರು: ನಗರದಲ್ಲಿ ಭಾರೀ ಸಂಚಲನ ಮೂಡಿಸಿರುವ ಮಹತ್ವದ ಕಳ್ಳತನ ಪ್ರಕರಣವೊಂದು ಇದೀಗ ಬೆಳಕಿಗೆ ಬಂದಿದೆ. ರಾಜ್ಯ ಸಚಿವ Zameer Ahmed Khanಅವರ ನಿವಾಸದಲ್ಲೇ ವರ್ಷಗಳಿಂದ ಗುಟ್ಟಾಗಿ ನಡೆಯುತ್ತಿದ್ದ ಕೋಟ್ಯಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಕಳ್ಳತನದ ಅಸಲಿ ಕಥೆಯನ್ನು Bengaluru City Police ಇದೀಗ ಬಯಲಿಗೆಳೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಶಿವಾಜಿನಗರ ಠಾಣೆ ಪೊಲೀಸರು ಬಂಧಿಸಿದ್ದು, ಬಂಧಿತರಲ್ಲಿ ಸಚಿವರ ಕುಟುಂಬದ ಆಪ್ತ ಸಂಬಂಧಿಯೊಬ್ಬನೇ ಸೇರಿರುವುದು ಪ್ರಕರಣಕ್ಕೆ ಮತ್ತಷ್ಟು ತೀವ್ರತೆ ನೀಡಿದೆ.

ಬಂಧಿತ ಆರೋಪಿಗಳನ್ನು ಸೈಯದ್ ಅಮೀನ್ ಹಾಗೂ ಅಮೀರ್ ಅಹ್ಮದ್ ಎಂದು ಗುರುತಿಸಲಾಗಿದೆ. ಇವರಲ್ಲಿ ಸೈಯದ್ ಅಮೀನ್ ಸಚಿವ ಜಮೀರ್ ಅಹ್ಮದ್ ಖಾನ್ ಅವರ ತಾಯಿಯ ಹತ್ತಿರದ ಸಂಬಂಧಿಯಾಗಿದ್ದು, ಈ ಸಂಬಂಧದ ವಿಶ್ವಾಸವನ್ನೇ ದುರುಪಯೋಗಪಡಿಸಿಕೊಂಡು ಮನೆಯಲ್ಲಿ ಹಂತ ಹಂತವಾಗಿ ಚಿನ್ನಾಭರಣಗಳನ್ನು ಕಳವು ಮಾಡುತ್ತಿದ್ದ ಎಂಬುದು ತನಿಖೆಯಲ್ಲಿ ಬಹಿರಂಗವಾಗಿದೆ.

ಪೊಲೀಸರ ಪ್ರಕಾರ, ಆರೋಪಿಗಳು ಸುಮಾರು 1 ಕೋಟಿ 13 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣಗಳನ್ನು ಕಳವು ಮಾಡಿದ್ದು, ಈಗಾಗಲೇ ಸುಮಾರು 759 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ. ಉಳಿದ ಚಿನ್ನಾಭರಣಗಳು ಹಾಗೂ ಹಣದ ವ್ಯವಹಾರಗಳ ಕುರಿತು ತನಿಖೆ ಮುಂದುವರಿದಿದೆ.

ಕುಟುಂಬದ ವಿಶ್ವಾಸವೇ ಕಳ್ಳತನಕ್ಕೆ ದಾರಿ: ಸೈಯದ್ ಅಮೀನ್ ಕುಟುಂಬದ ಆಪ್ತ ಸಂಬಂಧಿಯಾಗಿದ್ದ ಕಾರಣ ಸಚಿವರ ಮನೆಗೆ ಮುಕ್ತ ಪ್ರವೇಶ ಹೊಂದಿದ್ದ. ಮನೆಯ ಸದಸ್ಯರೊಂದಿಗೆ ಆತ್ಮೀಯವಾಗಿ ಬೆರೆತು ವಿಶ್ವಾಸ ಗಳಿಸಿಕೊಂಡಿದ್ದ ಆತ, ಪ್ರತಿದಿನ ಮನೆಗೆ ಬರುತ್ತಿದ್ದ ಮತ್ತು ಮನೆಯವರ ಜೊತೆ ಸಹಜವಾಗಿ ವರ್ತಿಸುತ್ತಿದ್ದ ಎನ್ನಲಾಗಿದೆ.

ಈ ನಂಬಿಕೆಯನ್ನು ಬಳಸಿಕೊಂಡ ಆರೋಪಿಯು ಮನೆಯಲ್ಲಿದ್ದ ಚಿನ್ನಾಭರಣಗಳ ಬಗ್ಗೆ ಸಂಪೂರ್ಣ ಮಾಹಿತಿ ಹೊಂದಿದ್ದ. ಮನೆಯಲ್ಲಿ ಯಾರು ಯಾವಾಗ ಇರುತ್ತಾರೆ, ಯಾವ ಸಂದರ್ಭದಲ್ಲಿ ಆಭರಣಗಳನ್ನು ಹೊರತೆಗೆದುಕೊಳ್ಳುತ್ತಾರೆ, ಯಾವ ಅಲಮಾರಿಯಲ್ಲಿ ಯಾವ ಚಿನ್ನ ಇಡಲಾಗುತ್ತದೆ ಎಂಬುದನ್ನೆಲ್ಲ ಗಮನಿಸಿ ಕಳ್ಳತನಕ್ಕೆ ಪ್ಲಾನ್ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮದುವೆ ಕಾರ್ಯಕ್ರಮಗಳೇ ಕಳ್ಳತನದ ಟಾರ್ಗೆಟ್:

ಪೊಲೀಸರ ತನಿಖೆ ಪ್ರಕಾರ, ಮನೆಯಲ್ಲಿ ಮದುವೆ ಸಮಾರಂಭಗಳು ಅಥವಾ ದೊಡ್ಡ ಕುಟುಂಬ ಕಾರ್ಯಕ್ರಮಗಳು ನಡೆದಾಗ ಆರೋಪಿಗಳು ಹೆಚ್ಚು ಸಕ್ರಿಯರಾಗುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಮನೆಯ ಮಹಿಳೆಯರು ಆಭರಣಗಳನ್ನು ಹೆಚ್ಚಾಗಿ ಬಳಸುತ್ತಿದ್ದ ಕಾರಣ ಚಿನ್ನ ಹೊರಬರುತ್ತಿತ್ತು.

ಅದೇ ವೇಳೆ ಮನೆಯವರು ಕಾರ್ಯಕ್ರಮದ ಗದ್ದಲದಲ್ಲಿ ಬ್ಯುಸಿಯಾಗಿರುವ ಸಮಯವನ್ನು ಬಳಸಿಕೊಂಡು ಸೈಯದ್ ಅಮೀನ್ ಚಿನ್ನಾಭರಣಗಳನ್ನು ಎಗರಿಸುತ್ತಿದ್ದ ಎನ್ನಲಾಗಿದೆ. ಒಂದೇ ಬಾರಿ ದೊಡ್ಡ ಪ್ರಮಾಣದಲ್ಲಿ ಕಳ್ಳತನ ಮಾಡದೇ, ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಳ್ಳುತ್ತಿದ್ದ ಕಾರಣ ಆರಂಭದಲ್ಲಿ ಯಾರಿಗೂ ಅನುಮಾನ ಬಂದಿರಲಿಲ್ಲ.

2025ರಿಂದಲೇ ಆರಂಭವಾದ ಕಳ್ಳತನ: ಪೊಲೀಸರ ಪ್ರಕಾರ, ಈ ಕೃತ್ಯ ಕಳೆದ 2025ರಿಂದಲೇ ನಡೆಯುತ್ತಿತ್ತು. ಕಳೆದ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಹಂತ ಹಂತವಾಗಿ ಚಿನ್ನಾಭರಣಗಳನ್ನು ಕಳವು ಮಾಡಲಾಗುತ್ತಿತ್ತು.

ಮನೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಚಿನ್ನಾಭರಣಗಳಿದ್ದ ಕಾರಣ ಆರಂಭದಲ್ಲಿ ಆಭರಣಗಳು ಕಾಣೆಯಾಗುತ್ತಿರುವುದು ಕುಟುಂಬದ ಗಮನಕ್ಕೆ ಬಂದಿರಲಿಲ್ಲ. ಆದರೆ ಕಾಲಕ್ರಮೇಣ ಚಿನ್ನದ ಪ್ರಮಾಣ ಕಡಿಮೆಯಾಗುತ್ತಿರುವುದು ಮನೆಯವರಿಗೆ ಅನುಮಾನ ಮೂಡಿಸಿತ್ತು.

ಕೆಲ ಸಂದರ್ಭಗಳಲ್ಲಿ ಚಿನ್ನಾಭರಣಗಳು ಸಿಗದೇ ಇದ್ದಾಗ ಮನೆಯವರು ತಪ್ಪಾಗಿ ಬೇರೆಡೆ ಇಟ್ಟಿರಬಹುದು ಎಂದುಕೊಂಡಿದ್ದರು. ಆದರೆ ಮರುಮರು ಇದೇ ಘಟನೆ ನಡೆಯುತ್ತಿದ್ದಂತೆ ಅನುಮಾನ ಗಟ್ಟಿಯಾಗಿತ್ತು.

ಸ್ನೇಹಿತನ ಸಹಾಯದಿಂದ ಕಳ್ಳತನ: ಸೈಯದ್ ಅಮೀನ್ ಈ ಕೃತ್ಯವನ್ನು ಒಬ್ಬನೇ ಮಾಡಿರಲಿಲ್ಲ. ತನ್ನ ಸ್ನೇಹಿತ ಅಮೀರ್ ಅಹ್ಮದ್ ಸಹಾಯದಿಂದ ಕಳ್ಳತನ ಮಾಡುತ್ತಿದ್ದ ಎನ್ನಲಾಗಿದೆ. ಕಳವು ಮಾಡಿದ್ದ ಚಿನ್ನಾಭರಣಗಳನ್ನು ಅಡವಿಡುವುದು, ಹಣ ಪಡೆದುಕೊಳ್ಳುವುದು ಹಾಗೂ ಆ ಹಣವನ್ನು ಬೇರೆ ವ್ಯವಹಾರಗಳಿಗೆ ವರ್ಗಾಯಿಸುವ ಕೆಲಸಗಳಲ್ಲಿ ಅಮೀರ್ ಅಹ್ಮದ್ ಸಹ ಭಾಗಿಯಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಇಬ್ಬರೂ ಸೇರಿ ಕಳ್ಳತನದ ಸಂಪೂರ್ಣ ಯೋಜನೆ ರೂಪಿಸಿಕೊಂಡಿದ್ದರು. ಮನೆಯವರ ಅನುಮಾನ ತಪ್ಪಿಸಲು ಬಹಳ ಜಾಗರೂಕತೆಯಿಂದ ಕಾರ್ಯನಿರ್ವಹಿಸುತ್ತಿದ್ದರು ಎನ್ನಲಾಗಿದೆ.

ಕೋವಿಡ್ ನಂತರ ಆರ್ಥಿಕ ಸಂಕಷ್ಟ: ಈ ಕಳ್ಳತನದ ಹಿಂದಿನ ಪ್ರಮುಖ ಕಾರಣ ಹಣಕಾಸಿನ ಸಮಸ್ಯೆ ಎಂದು ತನಿಖೆಯಲ್ಲಿ ಬಹಿರಂಗವಾಗಿದೆ. ಆರೋಪಿಗಳು ಟ್ರಾವೆಲ್ಸ್ ವ್ಯವಹಾರ ನಡೆಸುತ್ತಿದ್ದರು. ಆದರೆ ಕೋವಿಡ್-19 ಸಮಯದಲ್ಲಿ ಪ್ರವಾಸೋದ್ಯಮ ಹಾಗೂ ಸಾರಿಗೆ ಕ್ಷೇತ್ರ ಸಂಪೂರ್ಣ ಕುಸಿದ ಪರಿಣಾಮ ಇವರ ವ್ಯವಹಾರ ಭಾರೀ ನಷ್ಟ ಅನುಭವಿಸಿತ್ತು.

ಲಾಕ್‌ಡೌನ್ ನಂತರವೂ ವ್ಯವಹಾರ ಚೇತರಿಸಿಕೊಳ್ಳದೆ ಸಾಲದ ಒತ್ತಡ ಹೆಚ್ಚಾಗಿತ್ತು. ಬ್ಯಾಂಕ್‌ಗಳು ಹಾಗೂ ಖಾಸಗಿ ಫೈನಾನ್ಸ್ ಸಂಸ್ಥೆಗಳಿಂದಲೂ ಸಾಲ ಸಿಗದೇ ಇದ್ದಾಗ ಆರೋಪಿಗಳು ಹಣಕ್ಕಾಗಿ ಪರದಾಡುತ್ತಿದ್ದರು.

ಈ ಸಂದರ್ಭದಲ್ಲಿ ಸುಲಭವಾಗಿ ಹಣ ಸಂಪಾದಿಸುವ ದುರಾಸೆಯಿಂದ ತಮ್ಮದೇ ಸಂಬಂಧಿಯ ಮನೆಗೆ ಕಣ್ಣಿಟ್ಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ರಿಯಲ್ ಎಸ್ಟೇಟ್‌ನಲ್ಲಿ ಕೋಟ್ಯಂತರ ಲಾಭದ ಕನಸು: ಕಳ್ಳತನದಿಂದ ಸಿಗುವ ಹಣವನ್ನು ಬಳಸಿಕೊಂಡು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಹೂಡಿಕೆ ಮಾಡಿ ದೊಡ್ಡ ಮಟ್ಟದ ಲಾಭಗಳಿಸುವ ಕನಸು ಆರೋಪಿಗಳದ್ದಾಗಿತ್ತು ಎನ್ನಲಾಗಿದೆ.

ಕಳವು ಮಾಡಿದ್ದ ಚಿನ್ನಾಭರಣಗಳನ್ನು ವಿವಿಧ ಕಡೆ ಅಡವಿಟ್ಟ